# ಸಾಧನೆಯ ಮಾರ್ಗಗಳು



ಎಲ್ಲಾ ಮಾರ್ಗಗಳಿಂದಲೂ ಭಗವಂತನ ಸಾಕ್ಷಾತ್ಕಾರ ಪಡೆಯಬಹುದು. ಎಲ್ಲಾ ಧರ್ಮಗಳೂ ಸತ್ಯವಾದುವೆ. ನಮ್ಮ ಮುಖ್ಯವಾದ ಕರ್ತವ್ಯ ಚಾವಣಿಗೆ ಹತ್ತಿ ಹೋಗುವುದು. ಆ ಕಾರ್ಯವನ್ನು ಮೆಟ್ಟಿಲ ಸಾಲಿನಿಂದಾಗಲಿ, ಬೊಂಬಿನ ಏಣಿಯಿಂದಾಗಲಿ ಅಥವಾ ಒಂದು ಹಗ್ಗದಿಂದಾಗಲಿ ಸಾಧಿಸಬಹುದು. ಅಷ್ಟೇ ಅಲ್ಲ, ಕೇವಲ ಬೊಂಬಿನಿಂದಲೇ ಹತ್ತಿಬಿಡಬಹುದು.

ನೀವು ಹೇಳಬಹುದು, ಪರರ ಧರ್ಮಗಳಲ್ಲಿ ಅನೇಕ ಕುಂದುಕೊರತೆಗಳಿವೆ ಎಂಬುದಾಗಿ. ನನ್ನ ಉತ್ತರ: ಇದ್ದರೆ ತಾನೆ ಏನು? ಪ್ರತಿಯೊಂದು ಧರ್ಮದಲ್ಲೂ ಇದ್ದೇ ಇದೆ. ಎಲ್ಲರೂ ಭಾವಿಸುತ್ತಾರೆ ತಮ್ಮ ಗಡಿಯಾರ ಸರಿಯಾಗಿ ನಡೆದುಕೊಂಡು ಹೋಗುತ್ತಿದೆ ಎಂಬುದಾಗಿ. ಆಂತರ್ಯದಲ್ಲಿ ವ್ಯಾಕುಲತೆ ಇದ್ದರೇ ಯಥೇಷ್ಟ. ಭಗವಂತನಲ್ಲಿ ಪ್ರೀತಿ ಇದ್ದರೇ ಸಾಕು. ಆತ ಅಂತರ್ಯಾಮಿ. ನಮ್ಮ ಆಂತರ್ಯದಲ್ಲಿರುವ ಪ್ರೀತಿ ವ್ಯಾಕುಲತೆ ಏನು ಎಂಬುದನ್ನು ಆತ ಅರಿತುಕೊಳ್ಳಬಲ್ಲ. ಉದಾಹರಣೆಗೆ ಒಬ್ಬನಿಗೆ ಅನೇಕ ಮಕ್ಕಳು ಅಂತ ಇಟ್ಟುಕೊಳ್ಳಿ. ದೊಡ್ಡ ಮಕ್ಕಳು ಆತನನ್ನು ಸ್ಪಷ್ಟವಾಗಿ 'ಅಪ್ಪ' 'ಅಯ್ಯ' ಎಂಬುದಾಗಿ ಕರೆಯುತ್ತವೆ. ಆದರೆ ಎಳೆಯ ಮಕ್ಕಳು ಅತಿ ಹೆಚ್ಚೆಂದರೆ 'ಪಾ,' 'ಯಾ' ಎಂಬುದಾಗಿ ಕರೆಯಬಲ್ಲುವು. ಈ ರೀತಿ ಅಸ್ಪಷ್ಟವಾಗಿ ಮಾತನಾಡುವ ಮಕ್ಕಳ ಮೇಲೆ ತಂದೆ ಕೋಪಿಸಿಕೊಳ್ಳುತ್ತಾನೇನು? ತಂದೆಗೂ ಗೊತ್ತಿದೆ ಅವೂ ತನ್ನನ್ನೇ ಕರೆಯುತ್ತಿವೆ, ಆದರೆ ಅವಕ್ಕೆ ತನ್ನ ಹೆಸರನ್ನು ಸ್ಪಷ್ಟವಾಗಿ ಉಚ್ಚರಿಸಲು ಸಾಧ್ಯವಾಗುತ್ತಿಲ್ಲ ಎಂಬುದಾಗಿ. ತಂದೆಗೆ ಎಲ್ಲಾ ಮಕ್ಕಳೂ ಒಂದೇ ಸಮ. ಹಾಗೆಯೇ ಭಕ್ತರೂ ಆತನನ್ನೇ ಕರೆಯುತ್ತಾರೆ, ಆದರೆ ವಿವಿಧ ಹೆಸರುಗಳಿಂದ. ಎಲ್ಲರೂ ಆ ಒಬ್ಬನನ್ನೇ ಕರೆಯುತ್ತಿರುವುದು. ಭಗವಂತ ಒಬ್ಬನೇ, ಆದರೆ ಆತನಿಗೆ ಹೆಸರು ಮಾತ್ರ ಅನೇಕ.

ಶಿಷ್ಯ: ಇಡೀ ಜೀವನದಲ್ಲೆಲ್ಲಾ ಸಾಧನೆ ಮಾಡಿಕೊಂಡು ಹೋಗುತ್ತಿರಬೇಕೇ?

ಶ್ರೀರಾಮಕೃಷ್ಣರು: ಇಲ್ಲ, ಮೊದಲು ಸ್ವಲ್ಪ ಕಾಲ ಸೊಂಟ ಕಟ್ಟಬೇಕಾಗುತ್ತದೆ. ಬಳಿಕ ಅಷ್ಟು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಎಲ್ಲಿಯವರೆಗೆ ದೋಣಿ ಅಲೆ, ಬಿರುಮಳೆ, ಬಿರುಗಾಳಿ ಇವುಗಳ ಮೂಲಕ ಅಥವಾ ನದಿಯ ತಿರುವಿನ ಮೂಲಕ ಹಾದು ಹೋಗಬೇಕಾಗಿರುವುದೋ ಅಲ್ಲಿಯವರೆಗೆ ದೋಣಿ ನಡೆಸುವವ ಎದ್ದು ನಿಂತು ಚುಕ್ಕಾಣಿ ಹಲಗೆಯನ್ನು ಬಿಗಿಯಾಗಿ ಹಿಡಿದು ಕೊಂಡಿರಬೇಕಾಗುತ್ತದೆ. ಆದರೆ ಅದನ್ನು ದಾಟಿಯಾದ ನಂತರ ಅಷ್ಟು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಅದು ತಿರುವನ್ನು ಹಾದ ನಂತರ ಅನುಕೂಲವಾದ ಗಾಳಿ ಬೀಸಲಾರಂಭಿಸಿದರೆ ಚುಕ್ಕಾಣಿ ಹಲಗೆಯನ್ನು ಸುಮ್ಮನೆ ಕೈಯಲ್ಲಿ ಹಿಡಿದುಕೊಂಡು ಹಾಯಾಗಿ ಕುಳಿತುಕೊಳ್ಳುತ್ತಾನೆ. ಬಳಿಕ ಪಟ ಕಟ್ಟಲು ವ್ಯವಸ್ಥೆ ಮಾಡಿ ತಂಬಾಕು ಸೇದಲು ಸಿದ್ಧನಾಗುತ್ತಾನೆ. ಹಾಗೇನೆ ಸಾಧಕನು ಕಾಮ–ಕಾಂಚನಗಳ ಬಿರುಗಾಳಿ, ಬಿರುಮಳೆ ಇವನ್ನೆಲ್ಲಾ ದಾಟಿಬಿಟ್ಟ ಅಂದರೆ ಆಗ ಆತನಿಗೆ ಶಾಂತಿ.

ಆತನ ಸಾಕ್ಷಾತ್ಕಾರಮಾಡಿಕೊಳ್ಳಬೇಕಾದರೆ ಯಾವುದಾದರೂ ಒಂದು ಭಾವವನ್ನು ಆಶ್ರಯಿಸಿಕೊಳ್ಳಬೇಕಾಗುತ್ತದೆ– ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ, ಮಧುರ ಇವುಗಳಲ್ಲಿ ಯಾವುದಾದರೂ ಒಂದನ್ನು.

**ಶಾಂತ** – ಋಷಿಗಳು ಅನುಸರಿಸಿದುದು. ಅವರಿಗೆ ಭಗವಂತನ ಹೊರತು ಬೇರೆ ಯಾವುದರ ಮೇಲಿನ ಕಾಮನೆಯೂ ಇರಲಿಲ್ಲ. ಇದು ಸತಿಯು ಪತಿಯ ಮೇಲೆ ಇಟ್ಟಿರುವ ನಿಷ್ಠೆಯ ಹಾಗೆ. ಆಕೆಗೆ ಗೊತ್ತಿದೆ, ತನ್ನ ಪತಿ ಕಂದರ್ಪನೇ ಎಂಬುದಾಗಿ.

**ದಾಸ್ಯ**– ಹನುಮಂತನದು. ರಾಮನ ಕೆಲಸ ಮಾಡುತ್ತಿರುವಾಗ ಸಿಂಹಪರಾಕ್ರಮಿಯಾಗುತ್ತಿದ್ದ. ಸತಿಯಲ್ಲೂ ಈ ಭಾವ ಇರುತ್ತದೆ – ಪ್ರಾಣಾಪಾಯವನ್ನು ಲೆಕ್ಕಿಸದೆ ಪತಿಸೇವೆ ಮಾಡುತ್ತಾಳೆ. ತಾಯಿಯಲ್ಲೂ ಇದು ಅಲ್ಪಸ್ವಲ್ಪ ಇರುತ್ತದೆ – ಯಶೋದೆಯಲ್ಲಿ ಇದ್ದ ಹಾಗೆ.

**ಸಖ್ಯ**– ಸ್ನೇಹಭಾವ. ಸ್ನೇಹಿತರು ಒಬ್ಬರನೊಬ್ಬರು ಆದರಿಸುತ್ತಾರೆ: 'ಬಾ, ಹತ್ತಿರ ಬಂದು ಕುಳಿತುಕೊ' ಎಂಬುದಾಗಿ. ಸುದಾಮನೇ ಮೊದಲಾದ ಸ್ನೇಹಿತರು ಕೆಲವು ವೇಳೆ ತಾವು ಎಂಜಲು ಮಾಡಿದ ಹಣ್ಣುಗಳನ್ನು ಶ್ರೀಕೃಷ್ಣನಿಗೆ ತಿನ್ನಿಸುತ್ತಿದ್ದರು. ಇನ್ನು ಕೆಲವು ವೇಳೆ ಆತನ ಹೆಗಲಮೇಲೂ ಹತ್ತಿಬಿಡುತ್ತಿದ್ದರು.

**ವಾತ್ಸಲ್ಯ**– ಯಶೋದೆಯದು. ಸತಿಯಲ್ಲೂ ಇದು ಸ್ವಲ್ಪ ಇರುತ್ತದೆ. ಆಕೆ ಪತಿಗೆ ತನ್ನ ಪ್ರಾಣ ಕೊಡಲೂ ಸಿದ್ಧಳಾಗಿರುತ್ತಾಳೆ. ಮಗು ಗಂಟಲವರೆಗೂ ತಿಂದರೆ ಆಗ ತಾಯಿಗೆ ತೃಪ್ತಿ. ಯಶೋದೆ ಕೃಷ್ಣನಿಗೆ ಬೆಣ್ಣೆ ತಿನ್ನಿಸಲೋಸುಗ ಅದನ್ನು ಕೈಯಲ್ಲಿ ಹಿಡಿದುಕೊಂಡು ಆತನೊಡನೆ ಸುತ್ತಾಡುತ್ತಿದ್ದಳು.

**ಮಧುರ** – ಶ್ರೀಮತಿಯದು (ರಾಧೆಯದು). ಸತಿಯಲ್ಲೂ ಈ ಭಾವ ಇದೆ. ಅದರಲ್ಲಿ ಉಳಿದ ನಾಲ್ಕೂ ಅಡಕವಾಗಿವೆ.

**ಶ್ರೀರಾಮಕೃಷ್ಣ ವಚನವೇದದಿಂದ**